# ಮೋಹಕ ಮದರಂಗಿ; ಶೈಲಿ ಥರಾವರಿ



**ಶುಭ ಸಮಾರಂಭಗಳಿಗೆ ಸಾಥಿಯಾಗಿದ್ದ ರಂಗು ರಂಗಿನ ಮದರಂಗಿ ಈಗ ಹಲವು ವಿನ್ಯಾಸಗಳಲ್ಲಿ ಮಹಿಳೆಯರ ಅಂಗೈ ಅಲಂಕರಿಸುತ್ತಿದೆ. ಮೊಘಲ್, ಪಾಕಿಸ್ತಾನಿ, ಮೊರಕ್ಕನ್ ಮೊದಲಾದ ಶೈಲಿಗಳ ಜೊತೆಗೆ 'ಬೇಬಿ ಶವರ್' ಎಂಬ ಹೊಸ ಶೈಲಿ ಇದೀಗ ಟ್ರೆಂಡ್ ಆಗಿದೆ.**

■ ಸುರೇಖಾ ಹೆಗಡೆ

ಮನಸಿಗೆ ಮುದ ನೀಡುವ, ಮರಂಗವಲ್ಲಿಯಲ್ಲಿಯೇ ಸೋಜಿಗ ಸೃಷ್ಟಿಸುವ ರಂಗಿನ ರಾಣಿ ಮದರಂಗಿಯನ್ನು ಮೆಚ್ಚದವರಿಲ್ಲ. ಪುಟ್ಟ ಮನಸ್ಸಿನಿಂದ ಹಿಡಿದು ಹಿರಿಯರವರೆಗೆ ಎಲ್ಲರನ್ನೂ ಆಕರ್ಷಿಸುವ ಇದು ತನ್ನನ್ನು ಸ್ಪರ್ಶಿಸಿದವರನ್ನೆಲ್ಲಾ ರಂಗಾಗಿಸುತ್ತ, ಪರಿಮಳ ಬೀರುತ್ತ ಮನದ ಸಂಭ್ರಮವನ್ನು ದುಪ್ಪಟ್ಟಾಗಿಸುತ್ತದೆ.

ಕಣ್ಣೋಟದಲ್ಲಿಯೇ ಮನಸಿಗೆ ಮುದ ನೀಡುವ ಈ ಮದರಂಗಿಗೆ ದಕ್ಷಿಣ ಏಷ್ಯದಲ್ಲಿಯೇ ವಿಶೇಷ ಸ್ಥಾನವಿದೆ. ಅದರಲ್ಲೂ ಮದುವೆ ಸಮಾರಂಭದಲ್ಲಿ ಮದುಮಕ್ಕಳು ಎಷ್ಟು ಮುಖ್ಯವೋ ಅಷ್ಟೇ ಪ್ರಾಮುಖ್ಯ ಈ ಮದರಂಗಿಗೂ ಇದೆ ಎಂದರೆ ತಪ್ಪಾಗಲಾರದು. ಹಬ್ಬವಿರಲಿ, ಮದುವೆ, ಮುಂಜಿಯಂಥ ವಿಶೇಷ ಸಂದರ್ಭಗಳಿರಲಿ ಮದರಂಗಿಯಿಂದ ಸಿಂಗರಿಸಿಕೊಳ್ಳುವುದು ಸಂಪ್ರದಾಯವೇ ಆಗಿಹೋಗಿದೆ. ಕಲಾವಿದರ ಕೈಚಳಕದಲ್ಲಿ ಶ್ರೀಮಂತವಾಗುತ್ತ ಆಧುನಿಕ ಜಗತ್ತಿನ ಟ್ರೆಂಡ್ ಆಗಿಯೂ ಮದರಂಗಿ ಜನಪ್ರಿಯವಾಗಿದೆ.

ಅಂಗೈ ಮಧ್ಯೆ ಚಿಕ್ಕದೊಂದು ಗೋಲಾಕಾರದ ವಿನ್ಯಾಸ ಹಾಕಿಸಿಕೊಳ್ಳುವುದರಿಂದ ಹಿಡಿದು ಭುಜದವರೆಗೂ ಮದರಂಗಿ ವಿನ್ಯಾಸ ವಿಸ್ತಾರಗೊಳ್ಳುತ್ತದೆ. ಮದುಮಗಳನ್ನು ಸಿಂಗರಿಸಲೆಂದೇ ವಿಶೇಷ ವಿನ್ಯಾಸಗಳ ಬ್ರೈಡಲ್



ಮೆಹೆಂದಿ ಜನಪ್ರಿಯಗೊಂಡಿದೆ. ಅಂದಹಾಗೆ ಮದರಂಗಿ ವಿನ್ಯಾಸದಲ್ಲಿಯೂ ಸಾಕಷ್ಟು ಶೈಲಿಗಳಿದ್ದು ಸಂದರ್ಭಕ್ಕೆ ತಕ್ಕಂತೆ ನಿಮಗಿಷ್ಟವಾಗುವ ವಿನ್ಯಾಸವನ್ನು ಆಯ್ದುಕೊಳ್ಳುವುದು ಮುಖ್ಯ.

## ಭಾರತೀಯ ಶೈಲಿ

ಮದರಂಗಿ ವಿನ್ಯಾಸದ ಚೆಲುವು ಹಾಗೂ ವಿನ್ಯಾಸವನ್ನು ಯಾವುದೇ ಕಲಾ ಪ್ರಕಾರದೊಂದಿಗೆ ಹೋಲಿಸಲಾಗದು. ಅದರ ಚೆಲುವೇ ವಿಶಿಷ್ಟವಾದುದು. ಹಾಗೆಯೇ ಭಾರತೀಯ ಶೈಲಿಯ ಮದರಂಗಿ ವಿನ್ಯಾಸ ಉಳಿದೆಲ್ಲ ವಿನ್ಯಾಸಕ್ಕಿಂತ ವಿಶೇಷವಾಗಿದೆ. ವಿನ್ಯಾಸದ ಪ್ರತಿಯೊಂದು ಭಾಗವನ್ನೂ ಅತ್ಯಂತ ಜಾಗರೂಕವಾಗಿ ವಿವರಣಾತ್ಮಕವಾಗಿ ರಚಿಸಲಾಗುತ್ತದೆ. ಕ್ರಿಯಾಶೀಲತೆಗೆ ಹಾಗೂ ಕಲಾನೈಪುಣ್ಯಕ್ಕೆ ಇಲ್ಲಿ ಹೆಚ್ಚಿನ ಒತ್ತು. ಒತ್ತೊತ್ತಾಗಿ ಚಿತ್ರಿಸಲಾಗುವ ಈ ವಿನ್ಯಾಸ ಕೈಗೆ ವಿಶೇಷವಾದ ಸೌಂದರ್ಯವನ್ನು ಕರುಣಿಸುತ್ತದೆ. ಬಗೆಬಗೆಯ ಹೂವು, ದೇವರ ಚಿತ್ರ, ನವಿಲು, ಚುಕ್ಕೆ, ಮನುಷ್ಯರ ಆಕೃತಿ, ಕಲಶ, ಮಂಡಲದ ವಿನ್ಯಾಸಗಳ ಪರಿಪೂರ್ಣ ಮಿಶ್ರಣ ಭಾರತೀಯ ಶೈಲಿಯ ಮದರಂಗಿ ವಿನ್ಯಾಸ. ಅಲ್ಲದೆ ಕ್ರಿಸ್‌ಕ್ರಾಸ್ ನಮೂನೆ, ಹೂವಿನ ವಿನ್ಯಾಸ, ಜ್ಯುವೆಲ್ಲರಿ ವಿನ್ಯಾಸ, ಬ್ಯಾಂಗಲ್ ಮೆಹೆಂದಿ ವಿನ್ಯಾಸಗಳು ಇತ್ತೀಚೆಗೆ ಹೆಚ್ಚು ಜನಮನ್ನಣೆ ಗಳಿಸಿವೆ. ಇದು ಕ್ಲಾಸಿ ಲುಕ್ ನೀಡುವುದರಿಂದ ಹೆಚ್ಚು ಆಕರ್ಷಕವಾಗಿರುತ್ತದೆ. ಅಲ್ಲದೆ ಭಾರತೀಯ ಶೈಲಿಯ ವಿನ್ಯಾಸ ರಚನೆ ತುಸು ಕಷ್ಟವಾಗಿದ್ದು ಕಲಾನೈಪುಣ್ಯವನ್ನು ಹೆಚ್ಚು ಬೇಡುತ್ತದೆ.

## ಅರೆಬಿಕ್ ಶೈಲಿ

ಮದರಂಗಿ ವಿನ್ಯಾಸಕ್ಕೆ ಮುಸ್ಲಿಂ ಸಮುದಾಯದ ಕೊಡುಗೆ ಅಪಾರ. ಅತ್ಯಂತ ಸರಳ ಹಾಗೂ